

# ಸಾಹಿತಿ ಎಂದಿಗೂ ವಿಜ್ಞಾನ ವಿರೋಧಿಯಲ್ಲ



ಸಾಹಿತಿಯೊಬ್ಬನ ದೈನಿಕ ಸಮಾಜದ ಇನ್ನಾವುದೇ ಜನಸಾಮಾನ್ಯನಂತೆಯೇ ಇರುತ್ತದೆ ಮತ್ತು ಅವನನ್ನು ಪ್ರತ್ಯೇಕ ಜೀವಿಯೆಂಬಂತೆ ಕಾಣುವ ದೃಷ್ಟಿಕೋನವೇ ದೋಷಪೂರಿತ. ಸಾಹಿತಿ ಯಾವತ್ತೂ ವಿಜ್ಞಾನದ ವಿರೋಧಿಯಲ್ಲ. ಅವನ ಹಾದಿಯೇ ಜ್ಞಾನದ್ದು, ಹಾಗಾಗಿ ವಿಜ್ಞಾನದ್ದು ಕೂಡ.

■ ನರೇಂದ್ರ ಪೈ

ವಿಜ್ಞಾನ ಎನ್ನುವುದನ್ನು ನಾವು ಮನುಷ್ಯನ ದೈನಂದಿನ ಬದುಕಿಗೆ ಹೊರತಾದ ಒಂದು ಶೈಕ್ಷಣಿಕ/ಸಂಶೋಧನೆಯ ಜ್ಞಾನಶಾಖೆಯಾಗಿ ಕಾಣುವಷ್ಟೂ ಕಾಲ ಅದು ಸಾಹಿತಿಗಳಿಗೂ, ಇತರ ಎಲ್ಲ ಸಾಮಾನ್ಯ ಮನುಷ್ಯರಂತೆಯೇ ಕೊಂಚ ಕಷ್ಟದ್ದು, ತಮಗೆ ಹೇಳಿಸಿದ್ದಲ್ಲ ಎನ್ನುವಂತೆಯೇ ಉಳಿದಿತ್ತು ಎಂದು ಒಪ್ಪಬಹುದು. ಆದರೆ, ಅವನ ದೈನಿಕಕ್ಕೆ ಸಲ್ಲುವಷ್ಟು ವಿಜ್ಞಾನ ಅವನಿಗೆ ಯಾವತ್ತೂ ಪರಕೀಯವಾಗಿಲ್ಲ. ಇತ್ತೀಚೆಗೆ ಒಬ್ಬ ರಂಗಕರ್ಮಿ ಒಂದು ವಿಡಿಯೊ ತುಣುಕಿನಲ್ಲಿ 'ಸಾಹಿತಿಗಳಿಗೆ ಓದುವುದು ಬರೆಯುವುದು ಬಿಟ್ಟರೆ ಬೇರೇನೂ ಬರುವುದಿಲ್ಲ, ಗೊತ್ತಿರುವುದಿಲ್ಲ' ಎಂದು ಲಂಗುಲಗಾಮಿಲ್ಲದ ಜೋಕ್ ಮಾಡುತ್ತಿದ್ದುದು ಕಂಡೆ. ತಮಾಷೆ ಎಂದರೆ ಇದನ್ನು ಸಾಹಿತ್ಯದ ಉಪಜೀವಿಯಾದ ಪ್ರಕಾಶಕರೊಬ್ಬರು ಹಂಚಿಕೊಂಡು ಖುಷಿ ಪಡುತ್ತಿದ್ದುದು! ಒಂದು ಫ್ಯೂಸ್ ಹೋದರೆ ಹಾಕಲು, ಹಾದಿಯಲ್ಲಿ ವಾಹನ ಕೆಟ್ಟು ನಿಂತರೆ ಏನಾಗಿದೆ ಎಂದು ನೋಡಲು ಬರುವುದಿಲ್ಲ; ಇತ್ಯಾದಿ ಇತ್ಯಾದಿ. ಅದು ಸಾಹಿತಿಗಳನ್ನು ತೋರಿಸುವುದಿಲ್ಲ, ಆಡುವ ವ್ಯಕ್ತಿಯ ಭ್ರಮೆಗಳನ್ನಷ್ಟೇ ತೋರಿಸುತ್ತದೆ. ಸಾಹಿತಿಯೊಬ್ಬನ ದೈನಿಕ ಸಮಾಜದ ಇನ್ನಾವುದೇ ಜನಸಾಮಾನ್ಯನಂತೆಯೇ ಇರುತ್ತದೆ ಮತ್ತು ಅವನನ್ನು ಪ್ರತ್ಯೇಕ ಜೀವಿಯೆಂಬಂತೆ ಕಾಣುವ ದೃಷ್ಟಿಕೋನವೇ ದೋಷಪೂರಿತ. ಸಾಹಿತಿ ಯಾವತ್ತೂ ವಿಜ್ಞಾನದ ವಿರೋಧಿಯಲ್ಲ. ಅವನ ಹಾದಿಯೇ ಜ್ಞಾನದ್ದು, ಹಾಗಾಗಿ ವಿಜ್ಞಾನದ್ದು ಕೂಡ.

ಸಾಹಿತಿಗೆ ಮೊತ್ತ ಮೊದಲಿಗೆ, ಕನ್ನಡದ ಲಿಪಿಯೂ ಕಂಪ್ಯೂಟರಿನಲ್ಲಿ ಲಭ್ಯವಾಗುವಂತಾಗಿದ್ದು ಒಂದು ಕ್ರಾಂತಿಕಾರಕ ಬೆಳವಣಿಗೆ. ಅದನ್ನು ಆತ ಮುಕ್ತವಾಗಿಯೇ ಸ್ವಾಗತಿಸಿದ್ದಾನೆ. ಮೊಬೈಲಿನಲ್ಲೂ ಹೆಚ್ಚಿನ ಕನ್ನಡಪ್ರಿಯರು ಕನ್ನಡ ಲಿಪಿಯನ್ನೇ ಬಳಸಲು ಬಯಸುತ್ತಾರೆ. ಹಾಗಿದ್ದೂ ಇದರಿಂದ ದೂರವುಳಿದ, ಕೈಬರಹಕ್ಕೇ ಆತುಕೊಂಡ ಸಾಹಿತಿಗಳಿಲ್ಲವೆ ಎಂಬ ಪ್ರಶ್ನೆ ಇದೆ. ಖಂಡಿತ ಇದ್ದಾರೆ. ಸಾಹಿತಿಗೆ ಈ ಹಂತದಲ್ಲಿ ಎದುರಾದ ಒಂದು ತೊಡಕಿನ ಬಗ್ಗೆ ಹೇಳಬೇಕು. ಸಾಹಿತ್ಯ, ಸೃಜನಶೀಲ ಕಲೆ ಮೆದುಳಿನ ಬಲಭಾಗದ ಚಟುವಟಿಕೆ. ಹಾಗೆಯೇ ಅವನ ಕಣ್ಣುಗಳು ವಸ್ತುವಿನ ಮೇಲೆ ಬಿದ್ದ ಬೆಳಕು ತೋರಿಸಿದ್ದನ್ನು ಕಾಣಲು ವಿಕಾಸಗೊಂಡಿರುವವೇ ಹೊರತು ಬೆಳಕನ್ನೇ ನೇರವಾಗಿ ನೋಡಲು ಅಥವಾ ಬೆಳಕಿನೊಂದಿಗೇ ಕಣ್ಣಿಗೆ ಬೀಳುವ ವಸ್ತುವನ್ನು ನೇರವಾಗಿ ಕಾಣಲು ಅಲ್ಲ. ಈ ಎರಡೂ ಸಂಗತಿಗಳ ನಡುವೆ ಒಂದು ಸಂಬಂಧವಿದೆ. ನಿಮ್ಮ ಕಣ್ಣುಗಳು ಬೆಳಕನ್ನು ನೋಡುತ್ತಿರುವಷ್ಟೂ ಹೊತ್ತು ಮೆದುಳಿನ ಎಡಭಾಗವೇ ಬಲಭಾಗಕ್ಕಿಂತ ಹೆಚ್ಚು ಚುರುಕಾಗಿರುತ್ತದೆ. ಹಾಗಾಗಿ ಕಂಪ್ಯೂಟರ್ ಪರದೆಯ ಮೇಲೆ ನೇರವಾಗಿ ಸಂವೇದನೆಗಳಿಗೆ, ಭಾವನೆಗಳಿಗೆ, ಭಾವುಕತೆಗೆ ಸಂಬಂಧಿಸಿದ ಬರವಣಿಗೆ ಅವನಿಗೆ ಸಹಜವಾಗಿ ಒಗ್ಗಿದೆಯೇ ಎನ್ನುವುದು ಒಂದು ಪ್ರಶ್ನೆ. ಬಹುಶಃ ಕೆಲವರು ಈ ಕಾರಣಕ್ಕೆ ಇವತ್ತಿಗೂ ಕೈಬರಹದಲ್ಲಿಯೇ ತಮ್ಮ ಕತೆ, ಕವಿತೆ, ಕಾದಂಬರಿಗಳನ್ನು ಬರೆಯಲು ಇಷ್ಟಪಡುತ್ತಾರೆ. ಹಾಗಿದ್ದೂ ಇದನ್ನು ವ್ಯಕ್ತಿಗತ ನೆಲೆಯಲ್ಲಷ್ಟೇ ಉತ್ತರಿಸಲು ಅಥವಾ ಉತ್ತರ ಕಂಡುಕೊಳ್ಳಲು ಸಾಧ್ಯ.

ಪ್ರಕಟಣೆ (ಡಿಜಿಟಲ್/ಆಡಿಬಲ್/ಪ್ರಿಂಟೆಡ್), ಪ್ರಚಾರ, ವ್ಯಾಪಾರ, ಬರಹಗಾರ, ಪ್ರಕಾಶಕ, ಓದುಗ ಸಂಬಂಧವೃದ್ಧಿಗೆ ವಿಜ್ಞಾನ, ತಂತ್ರಜ್ಞಾನದಿಂದ ಅಗಾಧ ಸ್ವರೂಪದ ಸಹಾಯ ಖಂಡಿತವಾಗಿಯೂ ಆಗಿದೆ. ಹಾಗೆಯೇ ಈ ಕ್ಷೇತ್ರದಲ್ಲಿ ಅವತರಿಸಿದ ಅನಾರೋಗ್ಯಕರ ಸ್ಪರ್ಧೆ ಮತ್ತು ಪ್ರಚಾರ – ಹಣದ ಅತೀ ಮಹತ್ವಕ್ಕೆ ಕೂಡ ಅದೇ ಕಾರಣವಾಗಿದೆ, ಅಥವಾ ಮನುಷ್ಯ ಕಾರಣನಾಗಿದ್ದಾನೆ. ಸಾಹಿತ್ಯ ಕೂಡ ಎಲ್ಲ ಕಲೆಗಳಂತೆ ಉದ್ಯಮವಾಗುವ ಹಾದಿಯಲ್ಲಿದೆ. ಅದು ಒಳ್ಳೆಯದೆ, ಕೆಟ್ಟದ್ದೆ ಎನ್ನುವ ಪ್ರಶ್ನೆ ಪ್ರಸ್ತುತವಾಗಿ ಉಳಿದೇ ಇಲ್ಲ.

ಪಂಡಿತ ರಾಜೀವ ತಾರಾನಾಥರು ಹೇಳಿದಂತೆ, ಕಾಲ ತನ್ನ ಮೂರ್ತಿಯನ್ನು ತಾನೇ ರಚಿಸಿಕೊಳ್ಳುತ್ತದೆ ಮತ್ತು ಅದರ ಆರಾಧನೆಯಲ್ಲಿ ತೊಡಗುತ್ತದೆ. ಅದನ್ನು ಸಾಹಿತಿಗಳು ಪ್ರಶ್ನಿಸಬೇಕೆನ್ನುವುದೇ ತಪ್ಪು. ಟೀವಿಯಲ್ಲಿ ಜ್ಯೋತಿಷಿಗಳೇ ವಿಜೃಂಭಿಸುತ್ತಿದ್ದರೆ ಅದಕ್ಕೆ ಕಾರಣ ಅದರ ಟಿಆರ್‌ಪಿಯಾದರೂ ಸಾಕಷ್ಟು ಚೆನ್ನಾಗಿದ್ದಿರಬೇಕು ಎಂದಲ್ಲವೆ? ಗಂಧ ಇರುವಲ್ಲಿ ನೊಣಗಳಿರುವುದಿಲ್ಲ, ಅವು ಮಲವಿರುವಲ್ಲಿ ಮುತ್ತಿಕೊಂಡಿರುತ್ತವೆ. ಅಂದಮಾತ್ರಕ್ಕೆ ಸಾಹಿತಿ ಏನು ಮಾಡಬಲ್ಲ! ಮಾಡಬಹುದಾದ್ದನ್ನು ಅವನು ಬರವಣಿಗೆಯಿಂದಲೇ ಮಾಡಬೇಕಾಗಿದೆ ಮತ್ತು ಅದನ್ನು ಆತ ಮಾಡುತ್ತಲೇ ಬಂದಿದ್ದಾನೆ. ಒಬ್ಬ ಸಾಹಿತಿ ಸಮಾಜಕ್ಕೆ ಮಾಡುತ್ತಿರುವುದನ್ನು ಅರಿತಿರುವವರು ಸಹಜವಾಗಿಯೇ ಎಲ್ಲಾ ಕಾಲಕ್ಕೂ ಕಡಿಮೆಯೇ. ಆದರೆ ಸಾಗುತ್ತಿರುವ ಕಾರ್ಯದ ಅರಿವಿಲ್ಲದಿದ್ದರೂ ಅವನ ಶಕ್ತಿಯ ಬಗ್ಗೆ ಸುಪ್ತ ಮನಸ್ಸಿನ ಭೀತಿಯಿಂದಲೇ ಅವನನ್ನು ವಿರೋಧಿಸುತ್ತಿರುವವರು ಹೆಚ್ಚು. ಈ ವಿರೋಧ ಭೀತಿಯಿಂದ ಹುಟ್ಟಿದ್ದು. ಅಷ್ಟು ಮಾಡುತ್ತಿದ್ದರೆ ಸಾಕು.